# ನಮೂನೆ–ಬ

## ಆಡಳಿತ ಮಂಡಳಿ/ಶಾಲೆಗಳು ಆಕ್ಷೇಪಣೆಗಳನ್ನು ಸಲ್ಲಿಸುವ ನಮೂನೆ

**(ಸಾರ್ವಜನಿಕರು ಈ ನಮೂನೆಯಲ್ಲಿ ಆಕ್ಷೇಪಣೆ ಸಲ್ಲಿಸುವಂತಿಲ್ಲ)**

**(ಕನ್ನಡ/ಆಂಗ್ಲ ಭಾಷೆಯಲ್ಲಿ ಕೆಳಗಿನ ನಮೂನೆಯನ್ನು ಬಳಸಿ ಆಡಳಿತ ಮಂಡಳಿ/ಶಾಲೆಗಳು ಆಕ್ಷೇಪಣೆಗಳನ್ನು ಸಲ್ಲಿಸಬಹುದು)**

1. ಪ್ರಕಟಿಸಿರುವ ಅನಧಿಕೃತ ಶಾಲೆಗಳ ಪಟ್ಟಿಯ ಜಿಲ್ಲೆ ಮತ್ತು ಕ್ರಮಸಂಖ್ಯೆ.
2. ಸಂಸ್ಥೆಯ ಹೆಸರು ಮತ್ತು ಪೂರ್ಣ ವಿಳಾಸ
3. ಆಡಳಿತ ಮಂಡಳಿಯ ಹೆಸರು ಮತ್ತು ಪೂರ್ಣ ವಿಳಾಸ
4. ಸಂಸ್ಥೆಯು ಪ್ರಾರಂಭವಾದ ವರ್ಷ. ನೋಂದಣಿ ಆದೇಶ ಸಂಖ್ಯೆ. ಪ್ರಥಮ ಮಾನ್ಯತೆ ಆದೇಶ ಸಂಖ್ಯೆ(ದಾಖಲೆ ಒದಗಿಸುವುದು)
5. ಇತ್ತೀಚಿನ ಮಾನ್ಯತೆ ನವೀಕರಣ ಆದೇಶ.
6. ಶಾಲೆಗೆ ನೀಡಲಾಗಿರುವ ಡೈಸ್ ಸಂಕೇತ ಸಂಖ್ಯೆ.
7. ಅನಧಿಕೃತ ಶಾಲೆ ಎಂಬುದಾಗಿ ಪ್ರಕಟಿಸಲು ಉಪನಿರ್ದೇಶಕರು ಯಾವ ನಿಯಮಗಳ ಉಲ್ಲಂಘನೆಯನ್ನು ಗುರುತಿಸಿರುತ್ತಾರೆ?
8. ಇದು **'<u>ಅನಧಿಕೃತ ಸಂಸ್ಥೆಯಲ್ಲ</u>'** ಎಂಬುದಾಗಿ ಭಾವಿಸಲು ಕಾರಣವೇನು? ಅನಧಿಕೃತ ಸಂಸ್ಥೆ ಎಂದು ಗುರುತಿಸಲು ಯಾವ ನಿಯಮಗಳನ್ನು ಉಲ್ಲಂಘಿಸಲಾಗಿದೆ ಎಂದು ಉಪನಿರ್ದೇಶಕರು ಪ್ರಕಟಿಸಿರುತ್ತಾರೆ? ಉಪನಿರ್ದೇಶಕರ ವರದಿಯಂತೆ 'ಉಲ್ಲಂಘಿತ ನಿಯಮ' ಪಾಲನೆ ಬಗ್ಗೆ ದಾಖಲೆ ಪ್ರತಿಯನ್ನು ಒದಗಿಸುವುದು.
9. ಈ ಬಗ್ಗೆ ವ್ಯಾಪ್ತಿಯ ಕ್ಷೇತ್ರ ಶಿಕ್ಷಣಾಧಿಕಾರಿ (ಬಿ.ಇ.ಓ) ಅಥವಾ ಉಪನಿರ್ದೇಶಕರು(ಆಡಳಿತ) ಡಿಡಿಪಿಐ ರವರಿಂದ ಈ ಹಿಂದೆ ಇದೇ ವಿಷಯದಲ್ಲಿ ನೋಟೀಸ್ ನೀಡಿದ್ದಲ್ಲಿ ಅನುಪಾಲನೆ ಬಗ್ಗೆ ವಿವರ ಮತ್ತು ದಾಖಲೆ ಒದಗಿಸುವುದು.
10. ಬೋಧಿಸುತ್ತಿರುವ ಮಾಧ್ಯಮ – ಯಾವ ಮಾಧ್ಯಮದಲ್ಲಿ ಬೋಧಿಸಲಾಗುತ್ತಿದೆ ಎಂಬುದಾಗಿ ಜಾಹೀರಾತು ನೀಡಲಾಗುತ್ತಿದೆ? ಯಾವ ಮಾಧ್ಯಮದಲ್ಲಿ ಬೋಧಿಸಲು ಅನುಮತಿ ದೊರೆತಿದೆ? ದಾಖಲೆ ಸಲ್ಲಿಸುವುದು. ಭಾಷಾ ನೀತಿ ಬಗ್ಗೆ ನ್ಯಾಯಾಲಯದಲ್ಲಿನ ಪ್ರಕರಣದಲ್ಲಿನ ಮನವಿದಾರರಾಗಿದ್ದರೆ ಸೂಕ್ತ ದಾಖಲೆಯನ್ನು ಸಲ್ಲಿಸುವುದು.
11. ರಾಜ್ಯ ಪಠ್ಯಕ್ರಮದ/ ಐಸಿಎಸ್‌ಇ–ಸಿಬಿಎಸ್‌ಇ ಮಂಡಳಿಗೆ ಸಂಯೋಜಿತವಾಗಿರುವ ಸಂಸ್ಥೆಯೇ ಎಂಬ ಬಗ್ಗೆ ಜಾಹೀರಾತು ನೀಡಲಾಗುತ್ತಿದೆ? ಸೂಕ್ತ ದಾಖಲೆಯನ್ನು ಒದಗಿಸುವುದು.(ಪ್ರಸ್ತುತ ಶೈಕ್ಷಣಿಕ ಸಾಲಿಗೆ)
12. ಸಂಸ್ಥೆಯ ಕಟ್ಟಡ ಇತ್ಯಾದಿ ಮೂಲಭೂತ ಸೌಕರ್ಯಗಳ ಬಗ್ಗೆ ಆಕ್ಷೇಪಣೆ ಇದ್ದರೆ ವಿವರ.
13. ಮಕ್ಕಳ ಸುರಕ್ಷತೆ ಇತ್ಯಾದಿ ಅಂಶಗಳ ಬಗ್ಗೆ ದೂರುಗಳಿದ್ದರೆ ವಿವರ ಮತ್ತು ದಾಖಲೆ ಒದಗಿಸುವುದು.
14. ಶಾಲೆಯಲ್ಲಿ ವಸೂಲು ಮಾಡುತ್ತಿರುವ ಶುಲ್ಕಗಳ ಬಗ್ಗೆ ಆಕ್ಷೇಪಣೆ ಇದೆಯೇ? ಇದ್ದರೆ ವಿವರ.
15. ಸಂಸ್ಥೆಯ ಸೂಚನಾ ಫಲಕದಲ್ಲಿ, ನೋಂದಣಿ/ಮಾನ್ಯತೆ/ ಐಸಿಎಸ್‌ಇ–ಸಿಬಿಎಸ್‌ಇ ಎನ್.ಒ.ಸಿ/ಐಸಿಎಸ್‌ಇ–ಸಿಬಿಎಸ್‌ಇ ಅಫಿಲಿಯೇಷನ್/ಶುಲ್ಕದ ವಿವರ/ಮಕ್ಕಳ ಸುರಕ್ಷತಾ ಸಹಾಯವಾಣಿ ಸಂಖ್ಯೆ ಇತ್ಯಾದಿ ವಿವರಗಳನ್ನು ಪ್ರಕಟಿಸಲಾಗಿದೆಯೇ?
16. ಸಂಸ್ಥೆಯ ಕುರಿತಾಗಿ ಹೆಚ್ಚಿನ ವಿವರಗಳನ್ನು ನೀಡುವುದಾದಲ್ಲಿ ದಾಖಲೆ ಸಮೇತ ಸಂಕ್ಷಿಪ್ತವಾಗಿ ಸಲ್ಲಿಸುವುದು.

**[ವಿಶೇಷ ಸೂಚನೆ: ಎಲ್ಲಾ ಆಕ್ಷೇಪಣೆಗಳು ಸೂಕ್ತ ಹಾಗೂ ಪ್ರಚಲಿತ ದಾಖಲೆಗಳ ದೃಢೀಕೃತ ಪ್ರತಿಗಳೊಂದಿಗೆ ಸಲ್ಲಿಸತಕ್ಕದ್ದು. ಅನ್ಯಥಾ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.]**

ಸಹಿ/–

(ಪ್ರಾಂಶುಪಾಲರು/ಶಾಲಾ ಮುಖ್ಯಸ್ಥರು ಪೂರ್ಣ ವಿಳಾಸ ಮತ್ತು ಶಾಲಾ ಮೊಹರು ಹಾಗೂ ಮೊಬೈಲ್ ಸಂಖ್ಯೆಯನ್ನು ನಮೂದಿಸುವುದು.)

ಸಹಿ/–

ಸಂಸ್ಥೆಯ ಆಡಳಿತ ಮಂಡಳಿಗೆ ಜವಾಬ್ದಾರಿಯುತರು(ಅಧ್ಯಕ್ಷರು/ಕಾರ್ಯದರ್ಶಿಗಳು) ಪೂರ್ಣ ವಿಳಾಸ ಮತ್ತು ಮೊಹರು ಹಾಗೂ ಮೊಬೈಲ್ ಸಂಖ್ಯೆಯನ್ನು

## <u>ನಮೂನೆ-ಅ</u>

## <u>ಸಾರ್ವಜನಿಕರು ಆಕ್ಷೇಪಣೆಗಳನ್ನು ಸಲ್ಲಿಸುವ ನಮೂನೆ</u>

**(ಆಡಳಿತ ಮಂಡಳಿ/ಶಾಲೆ ಈ ನಮೂನೆಯಲ್ಲಿ ಆಕ್ಷೇಪಣೆ ಸಲ್ಲಿಸುವಂತಿಲ್ಲ)**

**(ಕನ್ನಡ/ಆಂಗ್ಲ ಭಾಷೆಯಲ್ಲಿ ಕೆಳಗಿನ ನಮೂನೆಯನ್ನು ಬಳಸಿ ಸಾರ್ವಜನಿಕರು ಆಕ್ಷೇಪಣೆಗಳನ್ನು ಸಲ್ಲಿಸಬಹುದು)**

1. ಪ್ರಕಟಿಸಿರುವ ಅನಧಿಕೃತ ಶಾಲೆಗಳ ಪಟ್ಟಿಯ ಜಿಲ್ಲೆ ಮತ್ತು ಕ್ರಮಸಂಖ್ಯೆ.
2. ಸಂಸ್ಥೆಯ ಹೆಸರು ಮತ್ತು ಪೂರ್ಣ ವಿಳಾಸ
3. ಆಡಳಿತ ಮಂಡಳಿಯ ಹೆಸರು ಮತ್ತು ಪೂರ್ಣ ವಿಳಾಸ
4. ಬೋಧಿಸುತ್ತಿರುವ ಮಾಧ್ಯಮ – ಯಾವ ಮಾಧ್ಯಮದಲ್ಲಿ ಬೋಧಿಸಲಾಗುತ್ತಿದೆ ಎಂಬುದಾಗಿ ಜಾಹೀರಾತು ನೀಡಲಾಗುತ್ತಿದೆ?
5. ತಮ್ಮ ಮಗುವು ಸದರಿ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿದೆಯೇ? ಅಥವಾ ಪರಿಚಿತರ ಮಗುವು ವ್ಯಾಸಂಗ ಮಾಡುತ್ತಿದೆಯೇ?
6. ರಾಜ್ಯ ಪಠ್ಯಕ್ರಮದ/ ಐಸಿಎಸ್‌ಇ-ಸಿಬಿಎಸ್‌ಇ ಮಂಡಳಿಗೆ ಸಂಯೋಜಿತವಾಗಿರುವ ಸಂಸ್ಥೆಯೇ ಎಂಬ ಬಗ್ಗೆ ಜಾಹೀರಾತು ನೀಡಲಾಗುತ್ತಿದೆಯೇ?
7. ಇದು **<u>'ಅನಧಿಕೃತ ಸಂಸ್ಥೆ ಅಥವಾ ಅನಧಿಕೃತ ಸಂಸ್ಥೆಯಲ್ಲ'</u>** ಎಂಬುದಾಗಿ ಭಾವಿಸಲು ಕಾರಣವೇನು? ದಾಖಲೆ ಲಭ್ಯವಿದ್ದಲ್ಲಿ ಪ್ರತಿಯನ್ನು ಒದಗಿಸುವುದು.
8. ಈ ಬಗ್ಗೆ ವ್ಯಾಪ್ತಿಯ ಕ್ಷೇತ್ರ ಶಿಕ್ಷಣಾಧಿಕಾರಿ(ಬಿ.ಇ.ಓ) ಅಥವಾ ಉಪನಿರ್ದೇಶಕರು(ಆಡಳಿತ) ಡಿಡಿಪಿಐ ರವರಲ್ಲಿ ಈ ಹಿಂದೆ ಇದೇ ವಿಷಯದಲ್ಲಿ ದೂರು ದಾಖಲಿಸಿದ್ದರೆ ಅದರ ವಿವರ ಮತ್ತು ದಾಖಲೆ ಒದಗಿಸುವುದು.
9. ಸಂಸ್ಥೆಯ ಕಟ್ಟಡ ಇತ್ಯಾದಿ ಮೂಲಭೂತ ಸೌಕರ್ಯಗಳ ಬಗ್ಗೆ ಆಕ್ಷೇಪಣೆ ಇದ್ದರೆ ವಿವರ.
10. ಮಕ್ಕಳ ಸುರಕ್ಷತೆ ಇತ್ಯಾದಿ ಅಂಶಗಳ ಬಗ್ಗೆ ದೂರುಗಳಿದ್ದರೆ ವಿವರ ಮತ್ತು ದಾಖಲೆ ಒದಗಿಸುವುದು.
11. ಶಾಲೆಯಲ್ಲಿ ವಸೂಲು ಮಾಡುತ್ತಿರುವ ಶುಲ್ಕಗಳ ಬಗ್ಗೆ ಆಕ್ಷೇಪಣೆ ಇದೆಯೇ? ಇದ್ದರೆ ವಿವರ.
12. ಸಂಸ್ಥೆಯ ಸೂಚನಾ ಫಲಕದಲ್ಲಿ, ನೋಂದಣಿ/ಮಾನ್ಯತೆ/ ಐಸಿಎಸ್‌ಇ-ಸಿಬಿಎಸ್‌ಇ ಎನ್.ಓ.ಸಿ/ಐಸಿಎಸ್‌ಇ-ಸಿಬಿಎಸ್‌ಇ ಅಫಿಲಿಯೇಷನ್/ಮಕ್ಕಳ ಸುರಕ್ಷತಾ ಸಹಾಯವಾಣಿ ಸಂಖ್ಯೆ ಇತ್ಯಾದಿ ವಿವರಗಳನ್ನು ಪ್ರಕಟಿಸಿರುತ್ತದೆಯೇ?
13. ಸಂಸ್ಥೆಯ ಕುರಿತಾಗಿ ಯವುದಾದರೂ ಅಹವಾಲು ಇದೆಯೇ? ಅಥವಾ ಹೆಚ್ಚಿನ ವಿವರಗಳನ್ನು ನೀಡುವುದಾದಲ್ಲಿ ಅವು ಏನು?

ಸಹಿ

(ಹೆಸರು ಮತ್ತು ಪೂರ್ಣ ವಿಳಾಸ ಹಾಗೂ ಮೊಬೈಲ್ ಸಂಖ್ಯೆಯನ್ನು ನಮೂದಿಸುವುದು.)

ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ

**ಆಯುಕ್ತರ ಕಛೇರಿ,ಹೊಸ ಸಾರ್ವಜನಿಕ ಕಟ್ಟಡಗಳು,ನೃಪತುಂಗ ರಸ್ತೆ, ಬೆಂಗಳೂರು-560001**

**ಸಂಖ್ಯೆ:ಸಿ7[2] ಪ್ರಾಶಿಅ.ಅನಧಿಕೃತ.81 /2014-15** **ದಿನಾಂಕ: 23.12.2014**

# ಪ್ರಕಟಣೆ

ವಿಷಯ: ಅನಧೀಕೃತ ಶಾಲೆಗಳ ಪಟ್ಟಿಯನ್ನು ಇಲಾಖಾ ವೆಬ್‌ಸೈಟ್ ನಲ್ಲಿ ಪ್ರಕಟಿಸಿರುವ ಬಗ್ಗೆ.

******

ರಾಜ್ಯದಲ್ಲಿ ಅನಧೀಕೃತವಾಗಿ ತಲೆ ಎತ್ತಿರುವ ಶಾಲೆಗಳನ್ನು ಗುರುತಿಸಲು ದಿನಾಂಕ:30.10.2014 ಮತ್ತು ದಿನಾಂಕ:20.11.2014 ರಂದು ರಾಜ್ಯದ ಎಲ್ಲಾ ಉಪನಿರ್ದೇಶಕರುಗಳಿಗೆ ಸುತ್ತೋಲೆಯನ್ನು ಹೊರಡಿಸಲಾಗಿದ್ದು ಈ ಸಂಬಂಧ ಬೆಂಗಳೂರು ಉತ್ತರ ಜಿಲ್ಲೆ ಮತ್ತು ದಕ್ಷಿಣ ಜಿಲ್ಲಾ ಉಪ ನಿರ್ದೇಶಕರುಗಳು ಅನಧೀಕೃತ ಶಾಲೆಗಳನ್ನು ಗುರುತಿಸಿರುವಂತೆ ದಿನಾಂಕ:22.12.2014ರಂದು ಸಾರ್ವಜನಿಕ ಹಾಗೂ ಶಾಲಾ ಆಡಳಿತ ಮಂಡಳಿಗಳ ಗಮನಕ್ಕಾಗಿ ಇಲಾಖಾ ವೆಬ್‌ಸೈಟ್ ನಲ್ಲಿ ಪ್ರಕಟಿಸಲಾಗಿದೆ.

ಸಂಬಂಧಪಟ್ಟ ಶಾಲಾ ಆಡಳಿತ ಮಂಡಳಿಗಳು ಮತ್ತು ಸಾರ್ವಜನಿಕರು ಸದರಿ ಅನಧಿಕೃತ ಶಾಲೆಗಳ ಬಗ್ಗೆ ತಮ್ಮ ಲಿಖಿತ ಹೇಳಿಕೆಯನ್ನು ಸಲ್ಲಿಸಲು ಕಾಲಾವಕಾಶವನ್ನು ನೀಡಿ ದಿನಾಂಕ:05.1.2015 ರವರೆಗೆ ಅವಕಾಶ ಕಲ್ಪಿಸಿದೆ. ಲಿಖಿತ ಹೇಳಿಕೆ ಸಲ್ಲಿಸಬಯಸುವ ಶಾಲಾ ಆಡಳಿತ ಮಂಡಳಿಗಳು ಮತ್ತು ಸಾರ್ವಜನಿಕರು ತಮ್ಮ ಲಿಖಿತ ಹೇಳಿಕೆಯನ್ನು ನಿಗಧಿತ ನಮೂನೆಯಲ್ಲಿ [ಸಾರ್ವಜನಿಕರು ನಮೂನೆ-ಅ, ಶಾಲಾ ಆಡಳಿತ ಮಂಡಳಿಗಳು-ಬ] ಸಂಬಂದಪಟ್ಟ ಜಿಲ್ಲಾ ಉಪ ನಿರ್ದೇಶಕರುಗಳಿಗೆ ಮೇಲ್ಕಂಡ ದಿನಾಂಕದೊಳಗಾಗಿ ಸಲ್ಲಿಸುವುದು.. ಉಪ ನಿರ್ದೇಶಕರುಗಳು ಸಾರ್ವಜನಿಕರಿಂದ, ಶಾಲಾ ಆಡಳಿತ ಮಂಡಳಿಗಳಿಂದ ಬಂದಂತಹ ಆಕ್ಷೇಪಣೆಗಳನ್ನು ದಿನಾಂಕ:23.12.2014 ರಂದು ನೀಡಿರುವ ನಮೂನೆಯಲ್ಲಿ ಕ್ರೋಡಿಕರಿಸಿ ಆಯುಕ್ತರಿಗೆ ದಿನಾಂಕ:15.1.2015 ರೊಳಗೆ ಸಲ್ಲಿಸುವಂತೆ ತಿಳಿಯಪಡಿಸಿದೆ. ಉಪನಿರ್ದೇಶಕರುಗಳು ಕ್ರೋಡಿಕೃತ ಮಾಹಿತಿಯ ನಮೂನೆಯನ್ನು ಪಿಡಿಎಫ್ ಸಾಫ್ಟ್ ಪ್ರತಿಯ ಸಿ.ಡಿಯನ್ನು ಸಹ ಸಲ್ಲಿಸುವುದು.

**ಮೊಹಮದ್ ಮೊಹಸಿನ್**
**ಆಯುಕ್ತರು**

**ಗೆ,**
**ಸಂಪಾದಕರು,**

-----------------

-----------------

ಪ್ರತಿಯನ್ನು ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಉತ್ತರ ಜಿಲ್ಲೆ ಮತ್ತು ದಕ್ಷಿಣ ಜಿಲ್ಲೆ ರವರಿಗೆ ಮುಂದಿನ ಕ್ರಮಕ್ಕಾಗಿ

ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ

**ಆಯುಕ್ತರ ಕಛೇರಿ,ಹೊಸ ಸಾರ್ವಜನಿಕ ಕಟ್ಟಡಗಳು,ನೃಪತುಂಗ ರಸ್ತೆ, ಬೆಂಗಳೂರು-560001**

**ಸಂಖ್ಯೆ:ಸಿ7[2] ಪ್ರಾಶಿಅ.ಅನಧಿಕೃತ.81 /2014-15** **ದಿನಾಂಕ: 22.12.2014**

***ಅತಿ ಜರೂರು***

## ಜ್ಞಾಪನಾ

ವಿಷಯ: ಅನಧೀಕೃತ ಶಾಲೆಗಳ ಪಟ್ಟಿಯನ್ನು ಇಲಾಖಾ ವೆಬ್‌ಸೈಟ್ ನಲ್ಲಿ ಪ್ರಕಟಿಸಿರುವ ಬಗ್ಗೆ.

******

ಬೆಂಗಳೂರು ಉತ್ತರ ಜಿಲ್ಲೆ ಮತ್ತು ದಕ್ಷಿಣ ಜಿಲ್ಲಾ ಉಪ ನಿರ್ದೇಶಕರುಗಳು ಅನಧಿಕೃತ ಶಾಲೆಗಳ ಪಟ್ಟಿಯನ್ನು ಸಲ್ಲಿಸಿದ್ದು ಸದರಿ ಪಟ್ಟಿಯನ್ನು ಇಲಾಖಾ ವೆಬ್‌ಸೈಟ್ ನಲ್ಲಿ ದಿನಾಂಕ:22.12.2014 ರಂದು ಪ್ರಕಟಿಸಿದೆ. ಜಿಲ್ಲಾ ಉಪ ನಿರ್ದೇಶಕರುಗಳು ಅನಧಿಕೃತ ಶಾಲೆಗಳನ್ನು ಯಾವ ನಿಯಮಗಳಡಿ ಅನಧಿಕೃತವೆಂದು ಘೋಷಿಸಿದೆ ಎಂಬ ಬಗ್ಗೆ ವಿವರ ನೀಡಿರುವುದಿಲ್ಲ. ಈ ಹಿನ್ನಲೆಯಲ್ಲಿ ಸಂಬಂಧಪಟ್ಟ ಉಪನಿರ್ದೇಶಕರುಗಳು ಕೆಳಕಂಡ ನಮೂನೆಯಲ್ಲಿ [ಈ ಹಿಂದಿನ ಪಟ್ಟಿಯ ಕ್ರಮಸಂಖ್ಯೆ ಯಂತೆಯೇ ಶಾಲಾವಾರು] ಮಾಹಿತಿಯನ್ನು ಸಿದ್ಧಪಡಿಸಿ ಮಾಹಿತಿಯನ್ನು ಪಿಡಿಎಫ್ ನಮೂನೆಯಲ್ಲಿ ಇಲಾಖಾ ವೆಬ್‌ಸೈಟ್ ನಲ್ಲಿ ನಿರ್ದೇಶಕರು [ಪ್ರಾಶಿ] ರವರ ಗಮನಕ್ಕೆ ತಂದು ಪ್ರಕಟಿಸುವುದು. ನಮೂನೆಯಲ್ಲಿ ಸಲ್ಲಿಸುವ ಮಾಹಿತಿಗೆ ಸ್ಪಷ್ಟವಾದ ವಿವರಣೆಯನ್ನು ಮತ್ತು ಸೂಕ್ತವಾದ ದಾಖಲೆಯನ್ನು ಲಗತ್ತಿಸುವುದು.

**ನಮೂನೆ**

| ಕ್ರ.ಸಂ | ಬಿಇಓ ತಾಲ್ಲೂಕು/ವಲಯ | ಶಾಲೆಯ ಹೆಸರು | ಭೇಟಿ ನೀಡಿದ ಅಧಿಕಾರಿ, ದಿನಾಂಕ, ಪದನಾಮ/ವರದಿಯ ಅಂಶಗಳು | ಅನಧಿಕೃತವೆಂದು ಘೋಷಿಸಿರುವ ತರಗತಿ/ವರ್ಷ [ನಿರ್ಧಿಷ್ಟವಾದ ತರಗತಿಯಾಗದೇ ಶಾಲೆಯೇ ಅನಧಿಕೃತವಾಗಿದ್ದಲ್ಲಿ ಅಂತೆಯೇ ನಮೂದಿಸುವುದು] | ಈ ಹಿಂದಿನ ವರ್ಷಗಳಲ್ಲಿಯೇ ಶಾಲೆ ಅನಧಿಕೃತ ಎಂದು ಕಂಡು ಬಂದಿದ್ದಲ್ಲಿ ಯಾವ ರೀತಿಯ ಕ್ರಮವಹಿಸಿದೆ | ಯಾವ ನಿಯಮದಡಿಯಲ್ಲಿ ಅನಧಿಕೃತವೆಂದು ಘೋಷಿಸಿದೆ .[ಕಾಯಿದೆ ನಿಯಮ ನಮೂದಿಸುವುದು] | ಕಾಯಿದೆ ನಿಯಮದಂತೆ ಈ ಸಂಸ್ಥೆಯ ಕುರಿತು ಈಗಾಗಲೇ ಕೈಗೊಂಡಿರುವ ಕ್ರಮದ ವಿವರಗಳು | ಮುಂದೆ ತೆಗದುಕೊಳ್ಳಬೇಕಾದ ಕ್ರಮದ ಬಗ್ಗೆ ಉಪ ನಿರ್ದೇಶಕರ ಸ್ಪಷ್ಟ ಅಭಿಪ್ರಾಯ | ಷರಾ |
|---|---|---|---|---|---|---|---|---|---|

ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ

ಗೆ,

ಉಪ ನಿರ್ದೇಶಕರು [ಆಡಳಿತ]
ಸಾರ್ವಜನಿಕ ಶಿಕ್ಷಣ ಇಲಾಖೆ,
ಬೆಂಗಳೂರು ಉತ್ತರ ಜಿಲ್ಲೆ/ದಕ್ಷಿಣ ಜಿಲ್ಲೆ